

# ಗಡ್ಡೋಪಾಖ್ಯಾನ!

ಕೊರೊನಾ ಕಾಲದಲ್ಲಿ ಸಲೂನ್ ಇಲ್ಲದೆ ವಿಧವಿಧ ಗಡ್ಡ ಬೆಳೆಸಿ ಅಡ್ಡಾಡುತ್ತಿರುವ 'ಗಡ್ಡಪ್ಪಂದಿರು' ಇದನ್ನೇ ಫ್ಯಾಷನ್ ಟ್ರೆಂಡ್ ಮಾಡಿಬಿಟ್ಟಿದ್ದಾರೆ. ಸೆಲೆಬ್ರಿಟಿಗಳಿಂದ ಹಿಡಿದು ಪಡ್ಡೆ ಹುಡುಗರವರೆಗೂ ಗಡ್ಡದಿಂದಲೇ ಮಿಂಚುತ್ತಿರುವ ಈ ಗಡ್ಡಧಾರಿಗಳ 'ಗಡ್ಡೋಪಾಖ್ಯಾನ' ಫ್ಯಾಷನ್ ಪ್ರಪಂಚದಲ್ಲಿ ಸಖತ್ ಸದ್ದು ಮಾಡುತ್ತಿದೆ.

■ ವಿಶಾಖ ಎನ್.

'ಶೀರ್ಷಾಸನ ಹಾಕಿದರೆ ಗಡ್ಡ ಸೊಂಪಾಗಿ ಬೆಳೆಯುತ್ತದೆ'– ಕನ್ನಡದ ಜನಪ್ರಿಯ ಸಿನಿಮಾ ನಟ ಯಶ್ ಹೀಗೆ ಸ್ವಾನುಭವ ಹಂಚಿಕೊಂಡರು. 'ಕೆಜಿಎಫ್–2' ಸಿನಿಮಾ ಕಥನ ಕುತೂಹಲಕ್ಕಿಂತ ಹೆಚ್ಚಾಗಿ ಅವರ ಪೊಗದಸ್ತಾದ ಗಡ್ಡದ ಸುತ್ತ ಪಡ್ಡೆಹೈಕಳ ಚರ್ಚೆ ಗಿರಕಿ ಹೊಡೆದಿರುವುದು ಸತ್ಯಸ್ಯ ಸತ್ಯ.

ಗಡ್ಡವೆನ್ನುವುದು ಮೊದಲೇ ಟ್ರೆಂಡ್ ಆಗಿತ್ತು. ಈ ಲಾಕ್‌ಡೌನ್ ಕಲಿಗಾಲದಲ್ಲಿ ಅದು 'ಫ್ಯಾಷನ್ ಸ್ಟೇಟ್‌ಮೆಂಟ್' ಆಗಿ ತಾರಾ ವರ್ಚಸ್ಸನ್ನು ಪಡೆದುಕೊಂಡಿದೆ. ಬಾಲಿವುಡ್ ನಟ ಅಕ್ಷಯ್ ಕುಮಾರ್ ಬಿಳಿಗಡ್ಡದ ಕುರಿತು ಮುಜುಗರಪಟ್ಟುಕೊಳ್ಳದೇ ಕ್ಯಾಮೆರಾಗೆ ಎದುರಾದ ಕಾಲವಿದು. ಅಷ್ಟೇನೂ ಚೆನ್ನಾಗಿ ಗಡ್ಡ ಬರುತ್ತಿಲ್ಲ ಎಂದು ಕೊರಗುತ್ತಿದ್ದ ಇನ್ನೊಬ್ಬ ನಟ ಟೈಗರ್ ಶ್ರಾಫ್ ಕೂಡ 'ಈಗ ನೋಡಿಯೇ ಬಿಡೋಣ' ಎನ್ನುವಂತೆ ಗಡ್ಡ ಕೃಷಿ ಪ್ರಾರಂಭಿಸಿರುವುದನ್ನು ಕೆಲವರು ಕಿಚಾಯಿಸಿದ್ದೂ ಇದೆ.

'ಕಹೋ ನಾ ಪ್ಯಾರ್ ಹೈ' ಹಿಂದಿ ಸಿನಿಮಾ ಮೂಲಕ ಹಸಿರು ಕುರುಚಲು ಗಡ್ಡದ ಹೊಸತೊಂದು ಟ್ರೆಂಡ್ ಕೊಟ್ಟಿದ್ದ ಹೃತಿಕ್ ರೋಷನ್ ಯಾವತ್ತೂ ಗಡ್ಡಪ್ಪನೇ! ಈಗ ಅವರ ಗಡ್ಡದ ಕೂದಲುಗಳಲ್ಲಿ ಅಲ್ಲಲ್ಲಿ ನರೆತ ಕೂದಲುಗಳೂ ನಿಸ್ಸಂಕೋಚವಾಗಿ ಕಾಣಿಸಿಕೊಳ್ಳತೊಡಗಿವೆ. ಅವನ್ನು ಇರುವ ಹಾಗೆಯೇ ಕಾಣಿಸಲು ಬಿಟ್ಟಿರುವ ಈ ನಟನದ್ದು ಗಟ್ಟಿ ಗುಂಡಿಗೆಯೇ ಹೌದು. ಸದಾ ಹಸನಾಗಿ ಟ್ರಿಮ್ ಮಾಡಿ ಗಡ್ಡಕ್ಕೆ ಶಹಬ್ಬಾಸ್ ಗಿಟ್ಟಿಸಿಕೊಳ್ಳುವ ಆಯುಷ್ಮಾನ್ ಖುರಾನಾ ಈ ಸಲ ತುಸು ಅಪರಾ ತಪರಾ ಎನ್ನುವ ರೀತಿ ಅದನ್ನು ಬಿಟ್ಟಿದ್ದನ್ನು ಕಂಡು ಅವರ ಹೆಂಡತಿ ಕಿಸಕ್ಕನೆ ನಕ್ಕಿದ್ದರಂತೆ. ಸೊಂಪಾದ ಕೂದಲಿರುವ ನಟ